# ಸೂಫಿಯ ಚಪ್ಪಲಿ



ಕಂಬಳಿಯ ಮೂರು ತುಂಡುಗಳನ್ನು ಇಬ್ಬರು ಸೂಫಿಗಳು ಹೇಗೆ ಹಂಚಿಕೊಳ್ಳುವುದು ಎಂಬ ಬಗ್ಗೆ ಆ ಇಬ್ಬರು ಸೂಫಿಗಳು ಹೊಡೆದಾಡಲು ಪ್ರಾರಂಭಿಸಿದರು. ಆಗ ಮತ್ತೊಬ್ಬ ಸೂಫಿಯ ಪ್ರಾಣ ಹೋಯಿತು. ಕಡೆಗೆ ಉಳಿದ ಒಬ್ಬ ಸೂಫಿ, ಈಗ ತನ್ನ ಮೇಲೆ ಮೂವರು ಸೂಫಿಗಳನ್ನು ಕೊಲೆ ಮಾಡಿದ ಆರೋಪ ಬರುತ್ತದೆ ಎಂದು ಯೋಚಿಸಿ ಆತ್ಮಹತ್ಯೆ ಮಾಡಿಕೊಂಡ.

■ ಹಿಂದಿ ಮೂಲ: ಅಸಗರ್ ವಜಾಹತ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್

ಇಡೀ ಹಿಂದೂಸ್ತಾನದಲ್ಲಿ ಸೂಫಿಗಳಿಗೆ ಹುಡುಕಾಟ ಪ್ರಾರಂಭವಾಗಿದೆ. ಅನುಭವಿಗಳು ಮತ್ತು ಅಲ್ಪಸ್ವಲ್ಪ ಆತ್ಮಾಭಿಮಾನವನ್ನಿಟ್ಟುಕೊಂಡಿರುವ ಸೂಫಿಗಳು ಅಲ್ಲಿ ಇಲ್ಲಿ ಅಡಗಿದ್ದಾರೆ. ತಮ್ಮನ್ನು ಹುಡುಕುವಲ್ಲಿ ಅಲೆಯುತ್ತಿರುವ ಜಾಹೀರಾತು ಕಂಪನಿಗಳ ಏಜೆಂಟ್‌ಗಳಿಂದ ತಪ್ಪಿಸಿಕೊಳ್ಳಲು ಹೀಗೆ ಮಾಡುತ್ತಿದ್ದಾರೆ. ಸೂಫಿಗಳನ್ನು ಅನೇಕ ಭಾರತೀಯ ಕಂಪನಿಗಳು ತಮ್ಮ ಬ್ರಾಂಡ್ ಅಂಬಾಸಿಡರ್ ಮಾಡಲು ಬಯಸುತ್ತಿವೆ. ಅಮೆರಿಕದಲ್ಲಿ ಯಶಸ್ಸನ್ನು ಪಡೆದ ನಂತರ ಹಿಂದೂಸ್ತಾನದಲ್ಲಿಯೂ ಸೂಫಿ ಫಾರ್ಮುಲಾ ಯಾಕೆ ಯಶಸ್ಸನ್ನು ಪಡೆಯಿತೆಂದರೆ ಅಲ್ಲಿಯ ಜನರಿಗೆ ಸೂಫಿಗಳ ದರ್ಶನ ಪ್ರೇಮ, ತ್ಯಾಗ ಮತ್ತು ಮೈತ್ರಿಯ ಬಗ್ಗೆ ಕಿಂಚಿತ್ತೂ ತಿಳಿದಿರಲಿಲ್ಲ, ಸೂಫಿಗಳು ಅವರಿಗೆ ಆಕರ್ಷಿಸುವ ಶಬ್ದಗಳಾಗಿದ್ದರು ಎಂದು  ಬಿಜಿನೆಸ್ ವಿಜಾಡ್ಸರ್  ಹೇಳಿದೆ. ಆದರೆ ಹಿಂದೂಸ್ತಾನದಲ್ಲಿ ಎರಡು ಪೀಳಿಗೆಗೂ ಹಿಂದಿನ ಜನ ಈ ಶಬ್ದಗಳಿಂದ ಪರಿಚಿತರಾಗಿದ್ದರು. ಈಗ ಈ ಶಬ್ದ ಹೊಸ ಜನರೇಶನ್‌ಗೆ ನಾಸ್ಟೆಲ್ಜಿಯಾ ಆಗಿದೆ ಹಾಗೂ ಇದರ ಜಾಗ ಡಿಸ್ಕೋ ಸಂಗೀತದಲ್ಲಿ ಸುರಕ್ಷಿತಗೊಂಡಿದೆ.

ಬಹಳಷ್ಟು ಹುಡುಕಾಟದ ನಂತರ ಒಬ್ಬ ಸೂಫಿ ಸಿಕ್ಕ. ಇವನು ಜಾಹೀರಾತು ಏಜೆನ್ಸಿಯವರಿಂದ ತಪ್ಪಿಸಿಕೊಳ್ಳಲು ದರೋಡೆಕೋರನಾಗಿದ್ದ. ತಾನು ದರೋಡೆಕೋರನಾಗಿ ಪಾರಾಗುವೆ ಎಂಬ ಭ್ರಮೆ ಅವನಿಗಿತ್ತು. ಆದರೆ ಅವನು ಸೂಫಿ ಆಗಿದ್ದ. ಹೀಗಾಗಿ ದರೋಡೆಕೋರನಾದ ಮೇಲೂ ಸೂಫಿಯಾಗಿಯೇ